ಒಡ್ಡುತ್ತದೆ. ಇದನ್ನು ಮೀರಿ ಬೆಳೆಯಲು ಸಾಧ್ಯವಾಗಿ ಜನಸಾಮಾನ್ಯ ಹೆಣ್ಣುಮಗಳು ಕೂಡ ಹಾಗೆ ಬದುಕುವಂತಾಗುವುದು ಸದ್ಯದ ಪರಿಸ್ಥಿತಿಯಲ್ಲಂತೂ ಸಾಧ್ಯವಿಲ್ಲ. ಮತ್ತು ಅದು ಸಾಧ್ಯವಾಗುವ ಕಾಲ ಸನಿಹದಲ್ಲೂ ಕಾಣುತ್ತಿಲ್ಲ

◆ **ಕಾರ್ಪೊರೇಟ್ ಜಗತ್ತು/ಆಧುನಿಕ ತಂತ್ರಜ್ಞಾನ ವಲಯದ ಉದ್ಯೋಗಾವಕಾಶಗಳು ಹೆಣ್ಣುಮಕ್ಕಳ ಸ್ಥಿತಿಯನ್ನು ಸುಧಾರಿಸಿವೆಯೇ?**

ಇಲ್ಲ. ಆರ್ಥಿಕವಾಗಿ ಹೆಣ್ಣು ಉತ್ತಮವಾಗಿರಬಹುದು ಆದರೆ ಅವಳ ಮನಃಸ್ಥಿತಿ ಇನ್ನೂ ಹಳೆಯ ಮೌಲ್ಯಗಳ ಮಧ್ಯದಲ್ಲೇ ಸಿಲುಕಿದೆ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಮೌಲ್ಯಗಳನ್ನು ದಾಟಿಸಲು ಹೆಣ್ಣನ್ನೂ ಉಪಕರಣವಾಗಿ ಬಳಸಲಾಗಿದೆ. ನೀವದನ್ನು ಮೀರಲು ಪ್ರಯತ್ನಿಸಿದಾಗ ಅದನ್ನು ತಡೆಯಲು ಸಮಾಜದ ಇನ್ನಿತರ ಉಪಕರಣಗಳ ಬಳಕೆ ಮೊದಲಾಗುತ್ತದೆ. ಉದಾಹರಣೆಗೆ ಸಮೂಹ ಮಾಧ್ಯಮವನ್ನೇ ನೋಡಿ. ಅಲ್ಲಿ ನಡೆಯುವ ಚರ್ಚೆಗಳಾಗಲಿ, ಕಾರ್ಯಕ್ರಮಗಳಾಗಲಿ ಮಹಿಳೆಯರ ಪರವಾಗಿ ಮಾತಾಡುವಂತೆ ಕಾಣುತ್ತಿದ್ದರೂ ಅವು ಆಳದಲ್ಲಿ ಪಿತೃಪ್ರಧಾನ ವ್ಯವಸ್ಥೆಯ ಉದ್ದೇಶಿತ ಮೌಲ್ಯಗಳ ಸಮರ್ಥನೆಯಲ್ಲಿಯೇ ತೊಡಗಿರುತ್ತವೆ. ಮಹಿಳಾ ಪುರವಣಿಗಳನ್ನು ತೆಗೆದುನೋಡಿದರೆ ಅಲ್ಲಿ ಅಡುಗೆ ಮಾಡುವುದು, ಮಕ್ಕಳನ್ನು ಬೆಳೆಸುವುದು, ಮನೆ ಅಲಂಕರಿಸುವುದು, ಇಂತಹ ವಿಷಯಗಳೇ ತುಂಬಿರುತ್ತವೆ. ಸ್ವತಂತ್ರವಾದ ಹೆಣ್ಣು ಅಂದಾಗಲೂ ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನೇ ಮುಂದುವರೆಸುವಂತೆ ಇರುತ್ತದೆ. ಇದನ್ನು ಸಾಧಿಸಲು ಅದು ಮಿಥ್‌ಗಳನ್ನು ಸೃಷ್ಟಿ ಮಾಡುತ್ತಾ ಹೋಗುತ್ತದೆ. ಈ ಮಿಥ್‌ಗಳನ್ನು ಒಡೆಯುವುದು ಕಷ್ಟ ಸಾಧ್ಯ. ಜನಪ್ರಿಯ ಸಿನಿಮಾಗಳ ಜನಪ್ರಿಯ ಕಥಾಸೂತ್ರ ನೋಡಿ – ಧೈರ್ಯವಂತ ಹೆಣ್ಣುಮಗಳನ್ನ ನಾಯಕ ಪಳಗಿಸಿ ಅವಳು ತನ್ನ ತಪ್ಪು ಒಪ್ಪಿಕೊಳ್ಳುವಂತೆ ಮಾಡಲಾಗುತ್ತದೆ. ಐಎಎಸ್ ಅಧಿಕಾರಿಯಾದ ಹೆಂಡತಿ ಕೆಳಗೆ ಬಿದ್ದ ಪೆನ್ ಎತ್ತಿಕೊಳ್ಳುವ ನೆಪದಲ್ಲಿ ಗಂಡನ ಬೂಟುಗಾಲನ್ನ ಕಣ್ಣಿಗೆ ಒತ್ತಿಕೊಳ್ಳುತ್ತಾಳೆ. ನೀನು ಏನಾದ್ರೂ ನಿನ್ನ ಜಾಗ ಇದೇ ಎನ್ನುವ ಮಿಥ್‌ಗಳನ್ನು ಸೃಷ್ಟಿ ಮಾಡಲಾಗುತ್ತೆ.



ಹೇಮಾ ಎಸ್. ಹಾಗೂ ಎಚ್.ಎಸ್. ಶ್ರೀಮತಿ